ಇತಿಹಾಸ ನೆನಪಿಸುತ್ತಿರುವ ಪ್ರೊ. ಕರೀಮುದ್ದೀನ್.







ಯೂರೋಪಿಯನ್ನರ ಸಮಾಧಿಗಳ ಗುಚ್ಛಗಳಲ್ಲಿರುವ ಸ್ಮಾರಕ

'ಒಂದೇ ನದಿ ಕವಲೊಡೆದು ಮತ್ತೆ ಸೇರುವುದು ಸಂಗಮವಲ್ಲ; ಎರಡು ಅಥವಾ ಮೂರು ನದಿಗಳು ಸೇರಿದರಷ್ಟೇ ಸಂಗಮ. ಅದೋ ಅಲ್ಲಿ ನೋಡಿ ಕಾವೇರಿ– ಲೋಕಪಾವನಿ ನದಿಗಳ ಸಂಗಮ ಸ್ಥಾನ' ಎಂದು ಪ್ರೊಫೆಸರ್ ತೋರಿಸುವ ಮೂಲಕ ನಮ್ಮ ಪಾರಂಪರಿಕ ಯಾತ್ರೆಗೆ ಮುನ್ನುಡಿ ಬರೆದರು.

ಕರ್ನಲ್ ಬೇಯ್‌ಲಿ ಸೆನಟೋಪ್ ಪರಿಚಯದೊಡನೆ ನಮ್ಮ ಸ್ಮಾರಕಗಳ ಹುಡುಕಾಟ ಆರಂಭವಾಯಿತು. ಬ್ರಿಟಿಷ್ ಸೇನೆಯಲ್ಲಿ ಕರ್ನಲ್ ಹುದ್ದೆಯಲ್ಲಿದ್ದ ವಿಲಿಯಂ ಬೇಯ್ಲಿಯನ್ನು ಹೈದರ್ ಅಲಿಖಾನ್ ಮತ್ತು ಟಿಪ್ಪು ಸುಲ್ತಾನರ ಸೇನೆ ಸೆ.10, 1780ರಂದು ಬಂಧಿಸಿ ಶ್ರೀರಂಗಪಟ್ಟಣಕ್ಕೆ ಎಳೆದು ತಂದಿತ್ತು. ಇಲ್ಲಿನ ಕೋಟೆ ಪಕ್ಕದ ಜೈಲಿನಲ್ಲಿ ಎರಡು ವರ್ಷ ಸೆರೆವಾಸ ಅನುಭವಿಸಿದ ಬೇಯ್ಲಿ ನ.13, 1792ರಲ್ಲಿ ಕೋಟೆಯೊಳಗೇ ಕೊನೆಯುಸಿರೆಳೆದ. ಶ್ರೀರಂಗಪಟ್ಟಣ ಪತನ (1799)ಗೊಂಡ 17 ವರ್ಷಗಳ ಬಳಿಕ 1816ರಲ್ಲಿ ಇಲ್ಲಿಗೆ ಬಂದ ಕರ್ನಲ್ ಬೇಯ್ಲಿಯ ಹತ್ತಿರದ ಸಂಬಂಧಿ ಜಾನ್ ಬೇಯ್ಲಿ (ಲಕ್ನೊ ರೆಜಿಮೆಂಟ್‌ನ ಕರ್ನಲ್) ಎಂಬಾತ ಟಿಪ್ಪು ಸುಲ್ತಾನ್ ಸಮಾಧಿ ಗುಂಬಸ್‌ಗೆ ಅನತಿ ದೂರದಲ್ಲಿ, ಕಾವೇರಿ ಸಂಗಮದ ದಾರಿಯಲ್ಲಿ ವಿಲಿಯಂ ಬೇಯ್ಲಿ ಹೆಸರಿನಲ್ಲಿ ಸ್ಮಾರಕವೊಂದನ್ನು ನಿರ್ಮಿಸಿದ. ಈ ಸ್ಮಾರಕ (ಸೆನಟೋಪ್)ವನ್ನು ಸಂಪೂರ್ಣ ಚುರಕಿ ಗಾರೆಯಿಂದ ನಿರ್ಮಿಸಲಾಗಿದೆ. ದುಂಡಗಿನ 8 ಸ್ತಂಭಗಳ ಈ ಕಟ್ಟಡ ತನ್ನ ವಿಶಿಷ್ಟ ಶೈಲಿಯಿಂದ ಕಣ್ಮನ ಸೆಳೆಯುತ್ತದೆ.

'ನಡೀರಿ ಅತ್ತ ಡವ್ ಕಾಟ್ ತೋರಿಸ್ತೀನಿ...' ಅಂದ್ರು ಪ್ರೊಫೆಸರ್. ಸೆನಟೋಪ್‌ನಿಂದ ಪರ್ಲಾಂಗು ದೂರದಲ್ಲಿದ್ದ ಪುಟ್ಟ ಗುಮ್ಮಟಾಕಾರದ ಸ್ಮಾರಕ ತೋರಿಸುತ್ತಾ 'ಇದು ಡವ್ ಕಾಟ್. ಟಿಪ್ಪು ಸುಲ್ತಾನ್ ಕಾಲದಲ್ಲಿ ಅಂಚೆ ವ್ಯವಸ್ಥೆ ಇರಲಿಲ್ಲ. ಒಂದೆಡೆಯಿಂದ ಮತ್ತೊಂದೆಡೆಗೆ ಮಾಹಿತಿ ರವಾನಿಸಲು ತರಬೇತಿ ಪಡೆದ ಪಾರಿವಾಳಗಳನ್ನು ಬಳಕೆ ಮಾಡಲಾಗುತ್ತಿತ್ತು. ಪಳಗಿದ ಪಾರಿವಾಳಗಳಿಗಾಗಿಯೇ ನಿರ್ಮಿಸಿದ ಮನೆ ಇದು' ಎಂದು ತಿಳಿಸಿದರು. ನಿಂತಿರುವ ಡವ್ ಕಾಟ್‌ನ ಎಡ ಭಾಗಕ್ಕಿದ್ದ ಮತ್ತೊಂದು ಡವ್‌ಕಾಟ್ ಕುಸಿದು ನೆಲ ಕಚ್ಚಿರುವುದನ್ನು ಕಂಡು ಮನಸ್ಸು ಕಲಕಿತು.

'ಚಮನ್ ಬಯಲು ನೋಡಿದ್ದೀರಾ'? ಎಂದು ಪ್ರೊಫೆಸರ್ ಕೇಳಿದ್ದಕ್ಕೆ ಯಾರಲ್ಲೂ ನಿಖರ ಉತ್ತರ ಇರಲಿಲ್ಲ. ಕಾವೇರಿ ಸಂಗಮ ಸ್ಥಾನದಿಂದ ತುಸು ಹಿಂದೆ ಬಲಕ್ಕೆ ತಿರುಗಿ ತೆಂಗು, ಸಪೋಟ ಹಣ್ಣಿನ ತೋಟಗಳ ನಡುವೆ ಹೆಜ್ಜೆ ಹಾಕಿದೆವು. ಅಲ್ಲೊಂದು ಜಗತಿ. ಅದನ್ನು ಸುಮಾರು 200 ವರ್ಷಗಳ ಹಿಂದೆ ನಿರ್ಮಿಸಿರಬಹುದು ಎಂದು ಅದನ್ನು ನೋಡಿದರೆ ಗೊತ್ತಾಗುತ್ತದೆ. ಈ ಮೂರಡಿ ಎತ್ತರದ ಸುಮಾರು 60x60 ಅಡಿ ಅಳತೆಯ ಜಗತಿಗೆ ಹೊಂದಿಕೊಂಡಂತೆ ಅಲ್ಲಲ್ಲಿ ಕುಸಿದು ಬಿದ್ದಿರುವ ಗೋಡೆಗಳು ಗೋಚರಿಸಿದವು. ಅಸ್ತವ್ಯಸ್ತವಾಗಿ ಬಿದ್ದಿದ್ದ ಕುರುಗಳೊಳಗೆ ಏನೋ ಮಹತ್ವದ್ದು ಅಡಗಿರುವಂತೆ ಭಾಸವಾಯಿತು.

'ಗಿಡ, ಮರ, ಬಳ್ಳಿಗಳಿಂದ ಮುಚ್ಚಿ ಹೋಗಿರುವ ಇವು ಸಾಮಾನ್ಯ ಕಟ್ಟಡದ ಗೋಡೆಗಳಲ್ಲ; ಒಡೆಯರ್ ದೊರೆಗಳ ಕಾಲದಲ್ಲಿ ಇದ್ದ ಅರಮನೆಯ ಅವಶೇಷಗಳು. ಈ ಪ್ರದೇಶ 'ಚಮನ್ ಬಯಲು' ಎಂದೇ ಹೆಸರಾಗಿತ್ತು. ಹೂದೋಟದ ಮಧ್ಯೆ ಸುಂದರ ಅರಮನೆ ಇಲ್ಲಿತ್ತು' ಎಂದು ಪ್ರೊಫೆಸರ್ ಕುತೂಹಲದ ವಿಷಯ ಬಿಚ್ಚಿಟ್ಟರು. 18ನೇ ಶತಮಾನದ ಅಬ್ಬೆದುಬ್ಬಾ ಚರ್ಚ್, ರಿವರ್‌ವ್ಯಾಲಿ ಸಂಸ್ಥೆ ಬಳಿಯ ಸ್ಮಾರಕ ಸ್ತಂಭ, ಅಲ್ಲಲ್ಲಿ ಸಿಗುವ ಮುರುಕು ಗೋಡೆಗಳನ್ನು ಅದ್ಭುತ ಎಂಬಂತೆ ಬೆರಗು ಕಣ್ಣಿನಿಂದ ನೋಡುತ್ತಿದ್ದ ನಮ್ಮನ್ನು ಉದ್ದೇಶಿಸಿ 'ಬನ್ನಿ ನಿಮಗೊಂದು ಅಚ್ಚರಿ ತೋರಿಸುತ್ತೇನೆ' ಎಂದು ಚಂದಗಾಲು ರಸ್ತೆ ಕಡೆಗೆ ಕರೆದೊಯ್ದರು.

ಕಾವೇರಿ ನದಿಯ ದಕ್ಷಿಣ ದಿಕ್ಕಿನಲ್ಲಿ ಬಲ ಭಾಗದಲ್ಲಿ ಒಂದು ದೊಡ್ಡ ಗೇಟ್ ಕಾಣಿಸಿತು. ಆ ದ್ವಾರದ ಒಂದು ಬದಿಯಲ್ಲಿ 'ನಾಯಿ ಇದೆ ಎಚ್ಚರಿಕೆ' ಎಂಬ ಹಳದಿ ಬಣ್ಣದ ಫಲಕ ಕಣ್ಣಿಗೆ ರಾಚಿತು. ಕಾವಲುಗಾರರನ್ನು ಕಾಡಿ–ಬೇಡಿ ಗೇಟು ತೆಗೆಸಿ ಹತ್ತಾರು ಅಡಿಗಳಷ್ಟು ದೂರ ನಡೆದ ಮೇಲೆ ಕಣ್ಣಿಗೆ ಕಂಡದ್ದು